## 15

# “ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನಿಟ್ಟನು”

## ಯೋಹಾನ 3:16, ಒಂದು ನಿಕಟ ನೋಟ

> “ಮೋಶೆಯು ಅಡವಿಯಲ್ಲಿ ಆ ಸರ್ಪವನ್ನು ಎತ್ತರದಲ್ಲಿಟ್ಟ ಹಾಗೆಯೇ ಮನುಷ್ಯಕುಮಾರನು ತನ್ನನ್ನು ನಂಬುವವರೆಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಎತ್ತರದಲ್ಲಿಡಲ್ಪಡಬೇಕು.
>
> “ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು. ದೇವರು ತನ್ನ ಮಗನ ಮುಖಾಂತರ ಲೋಕಕ್ಕೆ ರಕ್ಷಣೆಯಾಗಬೇಕೆಂದು ಆತನನ್ನು[1] ಕಳುಹಿಸಿಕೊಟ್ಟನೇ ಹೊರತು ತೀರ್ಪು ಮಾಡುವುದಕ್ಕಾಗಿ ಕಳುಹಿಸಲಿಲ್ಲ” (ಯೋಹಾನ 3:14-17).

ಈ ಪರಿಚ್ಛೇದದಲ್ಲಿ ಸತ್ಯವೇದದ ಬಲು ಚಿರಪರಿಚಿತವಾದ ಯೋಹಾನ 3:16ರಲ್ಲಿನ “ಸುವರ್ಣಾಕ್ಷರ” ಎಂದೇ ಪ್ರಸಿದ್ಧವಾದ ವಾಕ್ಯವು “ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು” ಎಂಬುದೇ ಆಗಿದೆ. ಈ ವಚನವು ಎರಡು ಕಾರಣಗಳಿಗಾಗಿ ಶ್ರೇಷ್ಟ ವಚನವೆನ್ನಿಸಿದೆ: (1) ಇದು ದೇವರ ಯೋಜನೆಯ ಎಲ್ಲಾ ವ್ಯಾಪ್ತಿಯನ್ನು[2] ಒಳಗೊಂಡಿರುವುದಾಗಿದೆ. ಹದಿನಾರನೆಯ ಶತಮಾನವನ್ನು ಪುನರ್ ನವೀಕರಿಸಿದ ಪುನರುಜ್ಜೀವನ ಯುಗದ ನಾಯಕನಾದ ಮಾರ್ಟಿನ್ ಲೂಥರ್ ಇದನ್ನು “ಚಿಕ್ಕ ಸತ್ಯವೇದ” ಎಂದು ಕರೆದಿದ್ದಾನೆ. (2) ಇದು ಪರಾಕಾಷ್ಟೆಗಳಿಂದ ತುಂಬಿದೆ; ಮನುಷ್ಯನು ಅರಿತಿರುವ ಅತಿ ಅದ್ಭುತ ವಿಷಯಗಳನ್ನು ತಿಳಿಸುವ ಶ್ರೇಷ್ಟ ವಾಕ್ಯಗಳನ್ನು ಸೂಚಿಸುವುದಾಗಿದೆ.[3]

### “*ದೇವರಿಗೋಸ್ಕರ*”: ಶ್ರೇಷ್ಟನಾದವನು

ಜಗತ್ತು, ಮನುಷ್ಯ ಮತ್ತು ಎಲ್ಲ ಒಳ್ಳೆಯ ಸಂಗತಿಗಳು *ದೇವರಿಂದಲೇ* ಉದ್ಭವಿಸುವಂತೆಯೇ ಈ ವಾಕ್ಯಭಾಗವು “ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ...” ಎಂದೇ ಪ್ರಾರಂಭವಾಗುತ್ತವೆ.

ಇಲ್ಲಿ ಒಬ್ಬ ಶ್ರೇಷ್ಟನಾದವನು ಇದ್ದಾನೆ. ದೇವರಿಗಿಂತ ಶ್ರೇಷ್ಟವಾದವುಗಳನ್ನು ನಮ್ಮ ಮನಸ್ಸು ಗ್ರಹಿಸಿಕೊಳ್ಳಲಾರದು. ದೇವರು ಮತ್ತು ದೇವರ ಕುರಿತಾಗಿ ಇರುವ ವೈಯಕ್ತಿಕ ಜವಾಬ್ದಾರಿಗಳ ಬಗ್ಗೆ ಅವನ ಮನದಲ್ಲಿ ಉದ್ಭವಿಸಿದ ವಿಚಾರಗಳು ಬಲು ಮಹತ್ವದ ವಿಚಾರವೆಂದು ಒಬ್ಬ ಗಮನಾರ್ಹವಾದ ಇತ್ತೀಚಿನ ಅಮೇರಿಕದ ಒಬ್ಬ ಮುತ್ಸದ್ದಿಯು ಹೇಳಿದ್ದಾರೆ.[4]

ದೇವರ ಬಗೆಗೆ ಮಾತನಾಡುತ್ತಾ ಪೌಲನು ಹೀಗೆ ಬರೆಯುತ್ತಾನೆ ಆತನು (ದೇವರು) “... ನಾವು ಬೇಡುವುದಕ್ಕಿಂತಲೂ ಯೋಚಿಸುವುದಕ್ಕಿಂತಲೂ ಅತ್ಯಧಿಕವನ್ನು ಮಾಡಲು ಶಕ್ತನು ...” (ಎಫೆಸ 3:20). ನಿಮ್ಮ ಊಹೆಯನ್ನು ವಿಸ್ತೃತವಾಗಿ ಹರಿಯಲು ಬಿಡಿರಿ; ದೇವರಿಗೆ ಇದನ್ನು

ಮಾಡಲಾಗದು ಎಂದು ನೀನು ಯೋಚಿಸಲು ಸಾಧ್ಯವೇ ಇಲ್ಲ.[5] ದೇವರು ಎಷ್ಟು ಶ್ರೇಷ್ಟವೆಂದು ದೇವರನ್ನು ಸಂಪೂರ್ಣವಾಗಿ ಗ್ರಹಿಸಿಕೊಳ್ಳುವ ನಿಟ್ಟಿನಲ್ಲಿ ನಾವು ಆತನ ಸಮಾನರಾಗಬೇಕು; ಒಂದು ರೀತಿಯಲ್ಲಿ ನಾವು ದೇವರುಗಳು ಆಗಬೇಕು!

## "*ಎಷ್ಟೊಂದು ಪ್ರೀತಿಸಿದನು*": ಶ್ರೇಷ್ಟ ಗುಣ

ಶ್ರೇಷ್ಟ ಜೀವಿಗಾಗಿ, "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟನು ..." ಎಂದು ಅದು ಹೇಳುತ್ತದೆ. ಪ್ರೀತಿಯು ಜಗತ್ತಿನಲ್ಲಿಯೇ ಶ್ರೇಷ್ಟ ಗುಣವಾಗಿದೆ; "ಹೀಗಿರುವುದರಿಂದ ನಂಬಿಕೆ ನಿರೀಕ್ಷೆ ಪ್ರೀತಿ ಈ ಮೂರೇ ನಿಲ್ಲುತ್ತವೆ; ಇವುಗಳಲ್ಲಿ ದೊಡ್ಡದು ಪ್ರೀತಿಯೇ" (1 ಕೊರಿಂಥ 13:13).[6] ನಮ್ಮ ವಾಕ್ಯದ ಈ ಭಾಗ ಮುಂದುವರೆಯುತ್ತಾ ಹೇಳುವುದೇನೆಂದರೆ ಅತಿ ಶ್ರೇಷ್ಟ ಗುಣವು ದೊಡ್ಡ ಪ್ರಮಾಣದಲ್ಲಿ ಇದೆ.[7]

ಎಫೆಸ 3:17-19 "ನೀವು ದೇವರ ಪ್ರೀತಿಯಲ್ಲಿ ನೆಲೆಗೊಂಡು ನಿಂತು ಅದರ *ಅಗಲ ಉದ್ದ ಎತ್ತರ ಆಳ* ಎಷ್ಟೆಂಬುದನ್ನು ... ಕ್ರಿಸ್ತನ ಪ್ರೀತಿಯನ್ನು ತಿಳುಕೊಳ್ಳಲು ಪೂರ್ಣಶಕ್ತರಾಗಿದ್ದು ..." (ಒತ್ತಿ ಹೇಳಿದ್ದು ನನ್ನದು.) ಎಂಬಲ್ಲಿ ದೇವರ ಪ್ರೀತಿಯು ಆಯಾಮಗಳನ್ನು ಹೊಂದಿದೆ ಎಂದು ಉದ್ಘೋಷಿಸುವುದಾಗಿದೆ ದೇವರ ಪ್ರೀತಿಯ "ಉದ್ದವು" ಎಷ್ಟು? ನಮ್ಮ ವೇದಭಾಗವು ನಮಗೆ ಹೀಗೆ ಹೇಳುತ್ತದೆ: "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು ..." ದೇವರ ಪ್ರೀತಿಯು ಆ ರೀತಿಯಲ್ಲಿ ಪ್ರಕಟಗೊಂಡಿದೆ![8]

## "*ಜಗತ್ತು*": ಶ್ರೇಷ್ಟಸಮೂಹ

ದೇವರು ಯಾರಿಗೋಸ್ಕರ ಶ್ರೇಷ್ಟ ಗುಣವನ್ನು ವಿಸ್ತರಿಸಲ್ಪಟ್ಟಿದ್ದಾನೆ. "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ... ಕೊಟ್ಟನು"; *ಜಗತ್ತು* ಎನ್ನುವಾಗ ಶ್ರೇಷ್ಟ ಸಮೂಹದಲ್ಲಿ ಜೀವಿಸುವಂತಹ, ಈಗ ಜೀವಿಸುವವರನ್ನು ಮತ್ತು ಈ ಮೊದಲೇ ಭೂಮಿಯು ನಾಶವಾಗುವಕ್ಕಿಂತ ಮುಂಚೆ ಜೀವಿಸಿರುವವರನ್ನು ಕೂಡಾ ಇವೆಲ್ಲವನ್ನೂ ಕೂಡಾ ಒಳಗೊಂಡಿದೆ. ಹೇಗೋ, ಇದು ಕೇವಲ ನಮ್ಮ ಮನಸ್ಸು ಕಲ್ಪಿಸಿಕೊಳ್ಳುವ ಶ್ರೇಷ್ಟ ಸಮೂಹವಲ್ಲ; ಆದರೆ ಬಲು ಆಯೋಗ್ಯವಾದ ಸಮೂಹವೂ ಆಗಿದೆ; ಪಾಪಯುಕ್ತವಾದ ಜಗತ್ತು, ಅವಿಧೇಯ ಜಗತ್ತು, ಕತ್ತಲೆಯಲ್ಲಿನ ಜಗತ್ತು[9] ಕೂಡಾ ಇದರಲ್ಲಿ ಒಳಗೊಂಡಿದೆ. ದೇವರು, ದೇವರಹಿತವಾದ ಈ ಲೋಕದೆಡೆಗೆ ನೋಡಿದನು ಮತ್ತು ಅದನ್ನು ಪ್ರೀತಿಸಿದನು. ದೇವರು ನಮ್ಮೊಡೆಗೆ ನೋಡಿದನು ಮತ್ತು *ನಮ್ಮನ್ನು* ಪ್ರೀತಿಸಿದನು.

ಒಂದು ಸಾರಿ ಆಫ್ರಿಕಾದ ಒಬ್ಬ ಮಿಶನರಿಯು ಬಾಲಕರ ಚಿಕ್ಕ ಗುಂಪನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಆತನು ಅವರಿಗೆ, "ನಾನು ಆಫ್ರೀಕಾದಲ್ಲಿ ಬೋಧಿಸುತ್ತಿರುವ ಸುವಾರ್ತೆಯ ಬಗ್ಗೆ ನಿಮಗೆ ಹೇಳುತ್ತೇನೆ. ನಿಮ್ಮಲ್ಲಿ ಒಳ್ಳೆಯ ಹುಡುಗರು ನಿಮ್ಮ ಕೈಗಳನ್ನು ಎತ್ತಿರಿ" ಎಂದು ಹೇಳಿದರು. ಯಾವುದೇ ಒಂದು ಕೈಯೂ ಮೇಲಕ್ಕೇಳಲಿಲ್ಲ. ಆಗ ಆತನು ಮುಗುಳು ನಕ್ಕು, "ಆಫ್ರಿಕಾದಲ್ಲಿನ ರೀತಿಯ ಸಂದೇಶವನ್ನೇ ನಾನು ನಿಮಗೋಸ್ಕರವೂ ಹೊಂದಿದ್ದೇನೆ ದೇವರು ತುಂಟಮಕ್ಕಳನ್ನೂ ಪ್ರೀತಿಸುತ್ತಾನೆ" ಎಂದು ಹೇಳಿದನು.

ಆದರೆ ಇದು ಸರಿಯೆಂದು ಕಾಣಿಸದಿದ್ದರೂ ಸತ್ಯವಾದದ್ದಾಗಿದೆ. "ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟಿದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ" (ರೋಮಾಪುರ 5:8).[10]

## "*ಆತನು ಕೊಟ್ಟನು*": ಶ್ರೇಷ್ಟವಾದ ಕಾರ್ಯ

ಆತನು ಆ ಶ್ರೇಷ್ಟವಾದ ಗುಣವು ತೋರ್ಪಡುವುದಕ್ಕಾಗಿ ಶ್ರೇಷ್ಟ ಸಮೂಹದ ಶ್ರೇಷ್ಟ ಜೀವಿ ಏನು ಮಾಡಿದನು? "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ... ಕೊಟ್ಟನು";

ಕೊಡುವದು, ಕ್ಷಮಾಪಣೆ, ಮತ್ತು ವಂದನೆ ಸಲ್ಲಿಸುವದು ನಮಗೆ ಹತ್ತಿರವಾಗಿರುವ ಮೂರು ಕಾರ್ಯಗಳು ದಿವ್ಯವಾದವುಗಳು ಆಗಿದ್ದು - ಇವೆಲ್ಲವುಗಳಿಗೂ ಮೂಲವಾದುದೆಂದರೆ ಶ್ರೇಷ್ಟ ಕಾರ್ಯವಾದ ಕೊಡುವುದೇ ಆಗಿದೆ.[11]

## "*ತನ್ನ ಒಬ್ಬನೇ ಮಗನನ್ನು*": ಶ್ರೇಷ್ಟ ವರ

"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು *ತನ್ನ ಒಬ್ಬನೇ ಮಗನನ್ನು* ಕೊಟ್ಟನು" ಎಂಬಲ್ಲಿ ದೇವರು ತಾನು ಏನನ್ನು ಕೊಟ್ಟನು ಎಂದು ತೋರಿಸುವ ಮೂಲಕ ವರಗಳಲ್ಲಿ ಶ್ರೇಷ್ಟವಾದ ತನ್ನ ಪ್ರೀತಿಯ ಶ್ರೇಷ್ಟತೆಯನ್ನು ತೋರಿಸಿದನು. ವಿವಿಧ ತರದ ವಾದ ವರಗಳು ಕೊಡಲ್ಪಟ್ಟಿವೆ. ಶ್ರೀಮಂತ ವ್ಯಕ್ತಿಗಳು ದೊಡ್ಡ ಮೊತ್ತದ ಹಣವನ್ನು ಯೋಗ್ಯಕಾರಣಕ್ಕಾಗಿ ಕೊಡುವುದಕ್ಕಾಗಿ ಹೆಸರಾಗಿರುತ್ತಾರೆ. ಅದು ಕೆಲಸಾರಿ ನಿರೀಕ್ಷೆಯನ್ನೂ ಮೀರಿದ ದೊಡ್ಡ ಮೊತ್ತವು ಆಗಿರಬಹುದು. ಆದರೆ ಈ ಕೊಡುಗೆಗೆ ಯಾವುದೇ ಕೊಡುಗೆಯು ಸರಿಸಾಟಿಯಿಲ್ಲ.

ದೇವರು ಏನನ್ನು ಕೊಡುಗೆಯಾಗಿ ಕೊಟ್ಟಿದ್ದಾನೆಂದು ಪರಿಗಣಿಸು: (1) ಆತನು ತನ್ನ ಮಗನನ್ನು ಕೊಟ್ಟನು. ಪ್ರೀತಿಪೂರ್ವಕನಾದ, ವಿಧೇಯನಾದ, ಕರ್ತವ್ಯ ಪ್ರಜ್ಞೆಯುಳ್ಳ ಆತನು ನಮಗೆ ಮಗನನ್ನು ಕೊಟ್ಟನು. ಅಂಥ ಮಗನನ್ನು ಕೊಟ್ಟುಬಿಡುವದು ಎಂಥ ಹೃದಯ ವಿದ್ರಾವಕವಾದದ್ದಲ್ಲವೇ! (2) ದೇವರು ಕೇವಲ ತನ್ನ ಅನೇಕ ಮಕ್ಕಳಲ್ಲಿ ಒಬ್ಬನನ್ನು ಕೊಟ್ಟುಬಿಡಲಿಲ್ಲ, ಬದಲಾಗಿ ಆತನು ತನಗೆ ಪ್ರಿಯನಾದ "ಒಬ್ಬನೇ"[12] ಮಗನನ್ನು ಕೊಟ್ಟನು. ಆ ಮಗನು ಆತನಿಗೆ ಪ್ರೀತಿಪಾತ್ರನೂ, ಆತನ ಸ್ವರೂಪದವನು ಆದ ದಿವ್ಯತೆಯ ಮೂರ್ತಿಯನ್ನು ಆತನ ಹೆಗಲ ಮೇಲಿರಿಸಿ ಕೊಟ್ಟನು. ಒಬ್ಬನೇ ಮಗನನ್ನು ಕೊಟ್ಟುಬಿಡುವುದರ ಬಗ್ಗೆ ಆಲೋಚಿಸಿಕೊಳ್ಳಿ. (3) ದೇವರು ತನ್ನ ಒಬ್ಬನೇ ಮಗನನ್ನು ಸುಮ್ಮನೆ ಕೊಡಲಿಲ್ಲ, ಬದಲಾಗಿ ಆತನನ್ನು ಯಜ್ಞಪಶುವಾಗಿ ಕೊಟ್ಟನು. ಅಯೋಗ್ಯರಾದ ಮಾನವರಿಗೋಸ್ಕರ ಯೇಸು ಭಯಂಕರವಾದ ಮತ್ತು ಅವಮಾನಕರವಾದ ಸಾವನ್ನು ಅಪ್ಪಬೇಕಿತ್ತು. ತನ್ನ ಮಗನನ್ನು ಕೊಟ್ಟುಬಿಟ್ಟಿದ್ದರೂ ಕೂಡಾ ಆತನ ಮಗನ ಕಣ್ಣೀರು ಆತನ ಹೃದಯಕ್ಕೆ ಅಲಗು ನಟ್ಟಂತಾಗಿರಬಹುದು! ಇಲ್ಲಿರುವ ಕೊಡುಗೆಯು ಎಷ್ಟು ಶ್ರೇಷ್ಟವಾದದ್ದೆಂದರೆ ಅದನ್ನು ನಾವು ಗ್ರಹಿಸುವುದಕ್ಕೆ ಸಾಧ್ಯವಾಗದು. ಪೌಲನು ಹೇಳುವಂತೆ, "ವರ್ಣಿಸಲಶಕ್ಯವಾದ ದೇವರ ವರಕ್ಕಾಗಿ ಸ್ತೋತ್ರ" (2 ಕೊರಿಂಥ 9:15) KJVಯಲ್ಲಿ, "ಮಾತುಗಳಲ್ಲಿ ಹೇಳಲಾಗದಂತಹ ಆತನ ವರಕ್ಕಾಗಿ ಸ್ತೋತ್ರ" ಎಂದಿದೆ.

ಜಗತ್ತಿನಲ್ಲಿರುವಂತಹ ಕೆಲವನ್ನು ನಾವು ಗ್ರಹಿಸಲಾರೆವು ಆದರೆ ಅವುಗಳ ಬಗೆಗೆ ನಾವು ಮಾತನ್ನಾಡಿದರೂ ಆಡಬಹುದಾಗಿದೆ - ಉದಾಹರಣೆಗೆ ಜಗತ್ತಿನ ಜನಸಂಖ್ಯೆ ಅಥವಾ ಜಾಗತಿಕ ಸಾಲ ಅಥವಾ ರಾಷ್ಟ್ರೀಯ ಸಾಲ - ಆದರೆ ದೇವರ ವರವು ಗ್ರಹಿಸಲಶಕ್ಯವಾದದ್ದು ಆಗಿದ್ದು ಅದರ ಬಗ್ಗೆ ನಾವು ನಿಷ್ಪಕ್ಷಪಾತತೆಯಿಂದ ಮಾತನಾಡಲೂ ಆಗುವುದಿಲ್ಲ, "ಪ್ರೀತಿಯು ಅದ್ಭುತವಾದದ್ದು, ಅತಿ ದಿವ್ಯವಾದದ್ದು, ನನ್ನ ಆತ್ಮ, ನನ್ನ ಜೀವಿತ, ನನ್ನೆಲ್ಲದರ ಬೇಡಿಕೆ ಇದು!"[13]

## "*ಒಬ್ಬನಾದರೂ*": ಶ್ರೇಷ್ಟ ಅವಕಾಶ

ದೇವರು ಮತ್ತು ಕ್ರಿಸ್ತ ಬಗೆಗೆ ಚರ್ಚಿಸಿದ ನಂತರ, ಕೊನೆಗೆ ನಾವು ಬರುವದು ವೇದಭಾಗದ "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು" ಎಂಬ ವಾಕ್ಯದ ಭಾಗಕ್ಕೆ ಒಬ್ಬನಾದರೂ ಇಂಗ್ಲೀಷ್‌ನಲ್ಲಿ ಯಾರಾದರೂ ಎಂಬರ್ಥವನ್ನು ಕೊಡುತ್ತದೆ, ಎಂಬ ಪದವು ಜಗತ್ತಿನಲ್ಲಿಯೇ ಅತಿ ಶ್ರೇಷ್ಟವಾದ ಅವಕಾಶವನ್ನು

ಘೋಷಿಸುವುದಾಗಿದೆ. ದೇವರ ಪ್ರೀತಿಯ ಕೊಡುಗೆ ಎಲ್ಲರಿಗಾಗಿ ಇದೆ (ಲೂಕ 2:10; ಮತ್ತಾಯ 28:19; ಅಪೊಸ್ತಲರ ಕೃತ್ಯಗಳು 10:34, 35; 17:30; 2 ಪೇತ್ರ 3:9). ಯೇಸು ತನ್ನ ಶಿಷ್ಯರಿಗೆ, "ನೀವು ಲೋಕದ *ಎಲ್ಲಾ* ಕಡೆಗೆ ಹೋಗಿ ಜಗತ್ತಿ*ಗೆಲ್ಲಾ* ಸುವಾರ್ತೆಯನ್ನು ಸಾರಿರಿ" ಎಂದು ಹೇಳಿದನು (ಮಾರ್ಕ 16:15; ಒತ್ತಿ ಹೇಳಿದ್ದು ನನ್ನದು).

ವೈಯಕ್ತಿಕವಾಗಿ ನಮಗೆ "ಒಬ್ಬನಾದರೂ" ಎಂಬ ಪದವು ನಮ್ಮಲ್ಲಿ ಅರ್ಥಪೂರ್ಣವಾದದ್ದು ಆಗಿರುತ್ತದೆ. ಹತ್ತೊಂಬತ್ತನೇಯ ಶತಮಾನದ ಬೋಧಕರಾದ ಫಿಲಿಪ್ಸ್ ಬ್ರೂಕ್ಸ್‌ರವರು ಯೋಹಾನ 3:16 ಬಗ್ಗೆ ಹೇಳುತ್ತಾ ದೇವರು ಒಂದು ವೇಳೆ ಒಬ್ಬನಾದರೂ ಎಂಬ ಪದದ ಬದಲಾಗಿ "ಆತನನ್ನು ನಂಬುವ ಒಬ್ಬ ಅಮೇರಿಕನ್ನನೂ ನಾಶವಾಗದೆ ಎಲ್ಲರೂ ನಿತ್ಯ ಜೀವವನ್ನು ಪಡೆಯ ಬೇಕೆಂದು" ಎಂದು ಹೇಳಿದ್ದಾದರೆ - ಆದರೆ ಅಲ್ಲಿ ಲ್ಯಾಡಿನ್ ಅಮೇರಿಕನ್ನರೂ, ದಕ್ಷಿಣ ಅಮೇರಿಕನ್ನರೂ, ಉತ್ತರ ಅಮೇರಿಕನ್ನರೂ, ಮತ್ತು ಕೆಲವರನ್ನು ಹೊರತುಪಡಿಸಿದಂತಾಗುತ್ತದೆ. ಒಂದು ವೇಳೆ ದೇವರು ಎಲ್ಲರಿಗೋಸ್ಕರ ಎಂಬ ಪದದ ಬದಲು "ಬ್ರೂಕ್ಸ್‌ರವರು ನಿತ್ಯಜೀವ ಹೊಂದಿದ್ದಾರೆ" - ಆದರೆ ಅಲ್ಲಿ ಅನೇಕ ಜನ ಬ್ರೂಕ್‌ರನ್ನು ಹೆಸರಿಸಿರಬಹುದು. ಅದು ಪಿಲಿಪ್ಪರವರು, ರಕ್ಷಿಸಲ್ಪಟ್ಟಿದ್ದಾರೆ ಎಂದು ಹೇಳಿರಬಹುದು, ಆಗಲೂ ಕೂಡಾ ಅಲ್ಲಿ ಒಂದಕ್ಕಿಂತ ಹೆಚ್ಚು ಪಿಲಿಪ್ಪಿ ಹೆಸರಿನವರು ಇರಲು ಸಾಧ್ಯ; ತಿರುಗಿ ಇಲ್ಲಿ ಸಂಶಯವು ಎದುರಾಗುತ್ತದೆ: "ನಾನೆಷ್ಟು ಸ್ತುತ್ಯಾರ್ಹನು" ಎಂದು ಪಿಲಿಪ್ಪ ಬ್ರೂಕ್ಸ್ ಹೇಳುತ್ತಾರೆ, "ಒಬ್ಬನಾದರೂ" ಎಂದು ದೇವರು ಹೇಳಿದ್ದರಲ್ಲಿ ಬ್ರೂಕ್‌ರವರು ಸೇರಸಲ್ಪಟ್ಟಿದ್ದಾರೆ! ಈ ವಚನವನ್ನು ನಮ್ಮಲ್ಲಿ ಪ್ರತಿಯೊಬ್ಬರೂ ಓದಬೇಕು ಮತ್ತು ನಾವು ರಕ್ಷಿಸಲ್ಪಟ್ಟಿದ್ದೇವೆ ಎಂದು ಅರಿತುಕೊಳ್ಳಬೇಕು ಎಂದು ನಾನು ನಂಬುವವನಾಗಿದ್ದೇನೆ!

ಹೇಗೋ "ಒಬ್ಬನಾದರೂ (ಯಾರಾದರೂ)" ಎಂಬ ಪದವು ನಮ್ಮ ಮೇಲೆ ಜವಾಬ್ದಾರಿಯನ್ನು ಹೊರಿಸುವುದಾಗಿದೆ ಜಗತ್ತು ಒಬ್ಬನ ಒಪ್ಪಿಕೊಳ್ಳುವಿಕೆ ಮತ್ತು "ಒಬ್ಬನ ಅಲ್ಲಗಳೆಯುವಿಕೆಯ" ಮೇಲೆ ಇರಿಸಲ್ಪಟ್ಟಿದೆ. ನಮ್ಮಲ್ಲಿ ಪ್ರತಿಯೊಬ್ಬರೂ ಈ ಮಹಿಮಾಯುತವಾದ ಅವಕಾಶವನ್ನು ತೆಗೆದುಕೊಳ್ಳಬೇಕೋ ಬೇಡವೋ ಎಂದು ನಿರ್ಧರಿಸಬೇಕಾಗಿದೆ (ಪ್ರಕಟಣೆ 22:17). ನಮ್ಮಲ್ಲಿ ಪ್ರತಿಯೊಬ್ಬರೂ ತಮ್ಮದೇ ಆದ ನಿತ್ಯತ್ವದ ಗತಿಯನ್ನು ಕಂಡುಕೊಳ್ಳುತ್ತಾರೆ.

## "*ನಂಬುವ*": ಶ್ರೇಷ್ಟವಾದ ಅಡಿಪಾಯ

ಶ್ರೇಷ್ಟ ಅವಕಾಶವಿದ್ದಾಗ ಅದನ್ನು ಹೇಗೆ ಸದುಪಯೋಗ ಮಾಡಿಕೊಳ್ಳಬೇಕು? ನಮ್ಮ ವೇದ ಭಾಗವು ಹೇಳುವಂತೆ, "ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು." ನಂಬಿಕೆಯು ಶ್ರೇಷ್ಟ ಅಡಿಪಾಯವಾಗಿದೆ. ಇದರ ಮೇಲೆ ಆತುಕೊಳ್ಳುವುದರ ಮೂಲಕ ನಾವು ಕ್ರೈಸ್ತರಾಗುತ್ತೇವೆ ಮತ್ತು ಕ್ರೈಸ್ತರ ಹಾಗೆ ನಡೆಯುತ್ತೇವೆ. "ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲ ಕೊಡುತ್ತಾನೆ ಎಂದು ನಂಬುವದು ಅವಶ್ಯ" (ಇಬ್ರಿಯ 11:6).

ಯೋಹಾನ 3:16ರಲ್ಲಿ "ನಂಬುವ" ಎಂಬ ಪದವು ಒತ್ತಿ ಹೇಳಲ್ಪಟ್ಟಿರುವದು ಕೇವಲ ಮಾನಸಿಕ ಸಮ್ಮತಿಗಾಗಿ ಅಲ್ಲ. ಆ್ಯಂಪ್ಲಿಫೈಡ್ ಬೈಬಲ್ (1987ರ ಸಂಚಿಕೆ) ಈ ವಚನವನ್ನು "ದೇವರು ಜಗತ್ತನ್ನು ಇಷ್ಟು ಒಳ್ಳೆಯ ರೀತಿಯಲ್ಲಿ ಪ್ರೀತಿಸಿದನು ಮತ್ತು ತನ್ನ ಪ್ರೀತಿಯ ಒಬ್ಬನೇ (ಅಮೂಲ್ಯನಾದ) ಮಗನನ್ನು (ಕೂಡಾ) ಕೊಟ್ಟು ಪ್ರೀತಿಯಿಂದ ಬಹುಮಾನಿಸಿದನು, ಆದ್ದರಿಂದ ಆತನಲ್ಲಿ ನಂಬಿಕೆಯಿಡುವ ಒಬ್ಬನಾದರೂ (*ವಿಶ್ವಾಸವಿಡುವ, ಅದರ ಮೇಲೆ ಆತುಕೊಳ್ಳುವ*) ನಾಶವಾಗುವುದಿಲ್ಲ ... ಮತ್ತು ನಿತ್ಯ ಜೀವವನ್ನು (ಎಂದೆಂದಿಗೂ ಇರುವ) ಹೊಂದುವನು" ಎಂಬ ರೀತಿಯಲ್ಲಿ ಭಾಷಾಂತರಿಸಿದೆ (ಒತ್ತಿ ಹೇಳಿದ್ದು ನನ್ನದು).

ನಿಜವಾದ ನಂಬಿಕೆಯು ದೇವರ ಚಿತ್ತಕ್ಕೆ ವಿಧೇಯರಾಗುವುದನ್ನು ಒಳಗೊಂಡಿದೆ (ನೋಡಿರಿ ಯಾಕೋಬ 2:20). "ಕ್ರಿಸ್ತ ಯೇಸುವಿನಲ್ಲಿರುವವರಿಗೆ ಸುನ್ನತಿಯಾದರೂ ಪ್ರಯೋಜನವಿಲ್ಲ ಆಗದಿದ್ದರೂ ಪ್ರಯೋಜನವಿಲ್ಲ. ಪ್ರೀತಿಯಿಂದ ಕೆಲಸ ನಡಿಸುವ ನಂಬಿಕೆಯಿಂದಲೇ ಪ್ರಯೋಜನವಾಗಿದೆ" ಎಂದು ಪೌಲನು ಹೇಳುತ್ತಾನೆ (ಗಲಾತ್ಯ 5:6). ನಂಬಿಕೆಯ ಮೇಲಿನ ತಳಪಾಯದ ಮತ್ತು ಪ್ರೀತಿಯಿಂದಾದ ಪ್ರೇರಣೆಯಿಂದ ಕಟ್ಟುವುದರ ಮೂಲಕ ಒಬ್ಬನು ತನ್ನ ಪಾಪದ ಬಗೆಗೆ ಪಶ್ಚಾತ್ತಾಪಪಟ್ಟು (ಲೂಕ 13:3), ಜನರ ಮುಂದೆ ಅರಿಕೆ ಮಾಡಿ (ಮತ್ತಾಯ 10:32) ಪಾಪ ಕ್ಷಮಾಪಣೆಗೋಸ್ಕರ ದೀಕ್ಷಾಸ್ನಾನದಲ್ಲಿ ಹೂಣಲ್ಪಡಬೇಕು (ಅಪೊಸ್ತಲರ ಕೃತ್ಯಗಳು 2:38).

## "*ಆತನಲ್ಲಿ*": ಶ್ರೇಷ್ಟವಾದ ಆಕರ್ಷಣೆ

ಅಂಥ ನಂಬಿಕೆಯು ಏನನ್ನು ಉತ್ಪಾದಿಸಬಲ್ಲದು? ವಿಧೇಯತೆಯತ್ತ ಯಾವುದು ನಮ್ಮನ್ನು ನಡೆಸುವದು? "... ಆತನನ್ನು ನಂಬುವ ಒಬ್ಬನಾದರೂ ನಾಶವಾಗುವುದಿಲ್ಲ." ಯೇಸು ರಕ್ಷಣೆಯನ್ನು ಸಾಧ್ಯವಾಗಿಸಿದ್ದಾನೆ. ಆತನೇ ಎಲ್ಲಾ ಕಾಲಗಳ ಶ್ರೇಷ್ಟ ಆಕರ್ಷಣೆಯಾಗಿದ್ದಾನೆ. ಆತನು, "ನಾನು ಭೂಮಿಯಲ್ಲಿಂದ ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು" ಎಂದು ಹೇಳಿದ್ದಾನೆ (ಯೋಹಾನ 12:32), ನಮ್ಮ ನಂಬಿಕೆಯ ಕೆಲ ಜನರಲ್ಲಿ, ಕೆಲ ತತ್ವದಲ್ಲಿ, ಅಥವಾ ಕೆಲ ಧಾರ್ಮಿಕ ಪದ್ಧತಿ ಗಳಲ್ಲಿ ಇಡುವುದಲ್ಲ. ಆದರೆ ನಮ್ಮ ಪಾಪಗಳಿಗಾಗಿ ಸತ್ತಂತ ಕ್ರಿಸ್ತನಲ್ಲಿ ಇಡುವುದಾಗಿದೆ!

## "*ನಾಶವಾಗದೆ*": ದೊಡ್ಡ ದುರಂತ

ನಾವು ಈ ನಂಬಿಕೆಯನ್ನು ಹೊಂದಿದ್ದಾದರೆ ಅದರ ಪರಿಣಾಮವು ಏನಾಗುತ್ತದೆ? "... ಆತನನ್ನು ನಂಬುವ ಒಬ್ಬನಾದರೂ *ನಾಶವಾಗುವುದಿಲ್ಲ ...*" ನಮ್ಮ ವಿಧೇಯವಾದ ನಂಬಿಕೆಯು ಮಾನವನ ಮೇಲೆ ಬರಬಹುದಾದ ದೊಡ್ಡ ದುರಂತದಿಂದ ತಪ್ಪಿಸುತ್ತದೆ.

ಈ ಜೀವಿತದಲ್ಲಿ ನಾವು ಎದುರಿಸುವ ಅನೇಕ ದುರಂತಗಳು ಸಂಭವಿಸಬಹುದು. ಒಬ್ಬ ರೈತನ ಎಲ್ಲಾ ಉಪಕರಣಗಳು ಮತ್ತು ದವಸಧಾನ್ಯದ ಕಣಜವು ಬೆಂಕಿಯಲ್ಲಿ ಹೊತ್ತುರಿಯುವಾಗ ರೈತನು "ನಾನು ನಾಶವಾದೆನು ..." ಎಂದು ಪ್ರಲಾಪಿಸುತ್ತಾನೆ,[14] ಒಂದು ಮನೆಯು ಪ್ರಳಯದಲ್ಲಿ, ಕುಟುಂಬದ ಎಲ್ಲಾ ಆಸ್ತಿಯನ್ನು ಕಳೆದುಕೊಂಡಾಗ ಮನೆಯವರೆಲ್ಲರೂ "ನಾವು ನಾಶವಾದೆವು" ಎಂದು ಅಳುತ್ತಾರೆ. ಒಂದು ದೊಡ್ಡ ಕುಟುಂಬದ ಯಜಮಾನ ಮತ್ತು ತಂದೆಯೂ ಮರಣಿಸಿದಾಗ ಆ ತಪ್ತಹೃದಯದ ಕುಟುಂಬದವರು "ನಾವು ನಾಶವಾದೆವು" ಎಂದು ರೋಧಿಸುತ್ತಾರೆ. ಅನಾರೋಗ್ಯದಿಂದ ಇರುವವನೊಬ್ಬನು ಕೂಡಾ "ನಾನು ನಾಶವಾದೆನು" ಎಂದು ಯೋಚಿಸುತ್ತಾನೆ. ಗಮನಿಸಿ: ದುರಂತಗಳಿಂದಾದ ಅವಘಡಗಳಿಗಿಂತಲೂ ಮಾನವನು ನಿತ್ಯತ್ವದ ಭಾಗ್ಯವನ್ನು ಕಳೆದುಕೊಳ್ಳುವದು ದೊಡ್ಡ ದುರಂತವಾಗಿದೆ. ಆಗ ಆತನು "ಕರ್ತನ ಸಾನಿಧ್ಯದಿಂದ ದೂರವಿರುವ ಮತ್ತು ಪವಿತ್ರ ಪ್ರಭಾವದಿಂದ ದೂರವಾಗಿರುವ ನಿತ್ಯವಾದ ಕೇಡಿಗೋಸ್ಕರ ದಂಡವನ್ನು ಆತನು ಎತ್ತಿದ್ದಾನೆ" (2 ಥೆಸಲೋನಿಕ 1:9; ನೋಡಿರಿ ಮತ್ತಾಯ 25:46; ಪ್ರಕಟಣೆ 20:10). ಅದೇ "ನಾಶ" ಎಂಬ ಪದದ ಅರ್ಥವಾಗಿದೆ!

## "*ಆದರೆ*": ಶ್ರೇಷ್ಟ ವ್ಯತ್ಯಾಸ

ಈ ವೇದ ಭಾಗವು "ನಾಶವಾಗುವರು ..." ಎಂಬುದರೊಂದಿಗೆ ಅಂತ್ಯವಾಗುವುದಿಲ್ಲ ಎಂಬುದಾಗಿ ನಾನು ಸಂತೋಷಿಸುವವನಾಗಿದ್ದೇನೆ. ಅದು ಮುಂದುವರೆಯುತ್ತಾ, "... ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು" (ಆಂಗ್ಲ ಭಾಷೆಯಲ್ಲಿ ಈ ಪದ ಬಳಿಕೆಯಾಗಿ ಆದರೆ ಕನ್ನಡದಲ್ಲಿ ನಾಶ

ವಾಗದೇ ಎಂದಿದೆ) ಆದರೆ ಎಂಬ ಚಿಕ್ಕ ಪದವು ಜಗತ್ತಿಲ್ಲಿ ಮಹತ್ತರವಾದ ವಿಶಿಷ್ಟತೆಯನ್ನು ಮಾಡುವುದಾಗಿದೆ. ಈ ವೇದ ಭಾಗದಲ್ಲಿ ಒಂದೆಡೆ ನಾವು "ನಾಶವಾಗುತ್ತದೆ" ಎಂದು ಮತ್ತು ಇನ್ನೊಂದೆಡೆಯಲ್ಲಿ "ನಿತ್ಯಜೀವ" ಎಂಬ ಪರಿಚ್ಛೇದವನ್ನು ಓದುತ್ತೇವೆ. ಇವೆರಡರ ಮಧ್ಯ ವ್ಯತ್ಯಾಸವನ್ನು ಮಾಡಲು ಚಿಕ್ಕ ವಿಶ್ಲೇಷಣ "ಆದರೆ" ಎಂಬುದಾಗಿದೆ!

## "*ನಿತ್ಯ ಜೀವವನ್ನು* ಪಡೆಯಬೇಕೆಂದು ": ಶ್ರೇಷ್ಟ ವಾಗ್ದಾನ

ಈ ಪರಿಚ್ಛೇದವು "... ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ *ನಿತ್ಯಜೀವವನ್ನು* ಪಡೆಯಬೇಕೆಂದು ಆತನನ್ನು ಕೊಟ್ಟನು" ಎಂಬ ವಾಗ್ದಾನದಿಂದ ಕೊನೆಯಾಗುತ್ತದೆ. ಇಲ್ಲೊಂದು ಶ್ರೇಷ್ಟವಾದ ವಾಗ್ದಾನವಿದೆ; "ಆತನು ಅವರ ಕಣ್ಣೀರನ್ನೆಲ್ಲಾ ಒರೆಸಿಬಿಡುವನು ಇನ್ನು ಮರಣವಿರುವದಿಲ್ಲ, ಇನ್ನು ದುಃಖವಾಗಲಿ ಗೋಳಾಟವಾಗಲಿ ಕಷ್ಟ ವಾಗಲಿ ಇರುವುದಿಲ್ಲ; ಮೊದಲಿದ್ದೆಲ್ಲಾ ಇಲ್ಲದೆ ಹೋಯಿತು" (ಪ್ರಕಟನೆ 21:4) ಈ ಸ್ಥಳದಲ್ಲಿ ನಿತ್ಯನಾದ ದೇವರೊಂದಿಗೆ ನಿತ್ಯವಾಗಿರುವ[15] ವಾಗ್ದಾನವು ಇದಾಗಿದೆ. ನೀನು ನಂಬಿ ವಿಧೇಯ ನಾದರೆ ದೇವರು ನಿನಗೆ ಕೊಡುವ ವಾಗ್ದಾನವು ಇದೇ ಆಗಿದೆ!

## ಮುಕ್ತಾಯ

ಒಂದೇ ವಚನದಲ್ಲಿಯೇ ಸುವಾರ್ತೆಯ ಹೃದಯಭಾಗದ ಕಥೆಯು ಇಲ್ಲಿದೆ:

"ದೇವರು" - ಶ್ರೇಷ್ಟವಾದ ಇರುವಿಕೆ.
"ಎಷ್ಟೋ ಪ್ರೀತಿಸಿ" - ಶ್ರೇಷ್ಟ ಗುಣ.
"ಜಗತ್ತಿಗೆ" - ಶ್ರೇಷ್ಟ ಸಮೂಹ.
"ಕೊಟ್ಟನು" - ಶ್ರೇಷ್ಟ ಕಾರ್ಯ.
"ತನ್ನ ಒಬ್ಬನೇ ಮಗನನ್ನು" ಶ್ರೇಷ್ಟ ಕೊಡುಗೆ.
"ಒಬ್ಬನಾದರೂ (ಯಾರಾದರೂ)" ಶ್ರೇಷ್ಟ ಅವಕಾಶ.
"ನಂಬಿ" ಶ್ರೇಷ್ಟ ಆದಾಯ.
"ಆತನಲ್ಲಿ" ಶ್ರೇಷ್ಟ ಆಕರ್ಷಣೆ.
"ನಾಶಾವಾಗಿರು" ದೊಡ್ಡ ದುರಂತ.
"ಆದರೆ" ದೊಡ್ಡ ವ್ಯೆತ್ಯಾಸ.
"ನಿತ್ಯ ಜೀವ ಹೊಂದುವರು" ದೊಡ್ಡ ವಾಗ್ದಾನ.

ನೀವು ಬೈಬಲ್‌ನ್ನು ಸಂಪೂರ್ಣವಾಗಿ ಅರ್ಥೈಸಿಕೊಳ್ಳದಿರಬಹುದು ಆದರೆ ಈ ವಚನವನ್ನು ಅರಿತುಕೊಂಡಿದ್ದೀರಾ? ಹಾಗೆ ನೀವು ಮಾಡಿದ್ದಾದರೆ, ಕರ್ತನ ಆಹ್ವಾನಕ್ಕೆ ಪ್ರತಿಕ್ರಿಯಿಸುವ ಅವಶ್ಯಕತೆಯು ನಿನಗಿದೆ. ಖಚಿತವಾಗಿ, ಈ ವಚನಗಳು ನಮ್ಮ ಹೃದಯವನ್ನು ಸ್ಪರ್ಷಿಸದೇ ಇದ್ದಲ್ಲಿ ಈ ವಚನವನ್ನು ಸತ್ಯಾಂಶವನ್ನು ಗಮನಿಸಲು ಅಸಾಧ್ಯ. ಈ ದಿನ ನೀನು ಸುವಾರ್ತೆಯ ಶಕ್ತಿಯ ಮೂಲಕ ಚಲಿತವಾಗಿದ್ದಾದರೆ, ದೇವರ ಪ್ರೀತಿಯ ಮೂಲಕ ಅದರ ಬಗ್ಗೆ ನೀನು ಏನನ್ನಾದರೂ ಮಾಡಲಾರೆಯಾ?

---

ಟಿಪ್ಪಣೆಗಳು

[1]ಯೇಸುವಿನ "ಮೊದಲ ಬರೋಣವು" ರಕ್ಷಕನಾಗಿ ಆಗಿತ್ತು ಹೊರತಾಗಿ ನ್ಯಾಯಾಧಿಪತಿಯಾಗಿ ಅಲ್ಲ; ಆದರೆ ಆತನ ಎರಡನೆಯ ಬರೋಣವು ನ್ಯಾಯಾಧಿಪತಿಯಾಗಿದೆ (ಅಪೊಸ್ತಲರ ಕೃತ್ಯಗಳು 17:31). [2]ದೇವರ ಯೋಜನೆಯನ್ನು ಒಂದು ಆಪಾದನೆ ಎಂದು ಇದು ಸಂಪೂರ್ಣವಾಗಿ ಆವರಿಸುವುದಿಲ್ಲ ಆದರೆ ದಿವ್ಯ ಯೋಜನೆಯ ಮೂಲ ತತ್ವಗಳನ್ನು ಇದು "ಸ್ಪರ್ಷಿಸುವುದಾಗಿದೆ."

[3]ಯೋಹಾನ 3:16ರಲ್ಲಿ ನಾನು ಮಾಡಿದಂತಹ ವಿಶ್ಲೇಷಣೆ ಸಾಮಾನ್ಯವಾಗಿ ಎಲ್ಲಾ ಮುದ್ರಣಗಳಲ್ಲಿ ಸಿಕ್ಕುತ್ತದೆ ಇದು ನನ್ನ ಭಾಷಾಂತರ ಆಗಿದೆ. ಈ ವಿಚಾರವನ್ನು ಮೂಲತಹವಾಗಿ ಯಾರು ತಂದರೆಂದು ನನಗೆ ತಿಳಿಯದು. [4]Daniel Webster, quoted in Frank S. Mead, comp. and ed., *12,000 Religious Quotations* (Grand Rapids, Mich.: Baker Book House, 1989), 189. [5]*ದೇವರು ತನ್ನ ಚಿತ್ತದ ಜೊತೆ* ಅನುಗುಣವಾಗಿರದಿದ್ದನ್ನು ಎಂದಿಗೂ ಮಾಡನು ಎಂದು ನೀನು ಯೋಚಿಸದಿರು. [6]ಪ್ರೀತಿಯ ಮೇಲಿನ ಸೇರಿಸಬಹುದಾದ ಪರಿಚ್ಛೇದಕ್ಕಾಗಿ 1 ಪೇತ್ರ 4:8; ಎಫೆಸ 3:17ನ್ನು ನೋಡಿರಿ. [7]ಕೆಲವರು ತಮ್ಮ ಪ್ರಸಂಗದಲ್ಲಿ ಇದನ್ನು ಪ್ರತ್ಯೇಕವಾದ ಅಂಶವೆಂದು ಪರಿಗಣಿಸಿದ್ದಾರೆ. [8]ದೇವರು ಪ್ರೀತಿ ಯಾಗಿ*ದ್ದಾನೆ* (1 ಯೋಹಾನ 4:7, 8). [9]ಧರ್ಮೋಪದೇಶಕಾಂಡ 9:2-4ರಲ್ಲಿರುವ ಪಾಪಮಯ ಜಗತ್ತನ್ನು ವರ್ಣಿಸಲು ಈ ಪರಿಚ್ಛೇದವು ಬಳಿಸಲ್ಪಟ್ಟಿದೆ. [10]ತೀತ 2:11; 1 ತಿಮೋಥೆ 2:3, 4ನ್ನು ಸಹ ನೋಡಿರಿ.

[11]ಅಪೊಸ್ತಲರ ಕೃತ್ಯಗಳು 20:28ನ್ನು ನೋಡಿರಿ. [12]ಗ್ರೀಕ್ ಪದದ ಭಾಷಾಂತರವು "ಒಬ್ಬನೇ ಮಗ" ಎಂದಿರುವನು. "ಒಂದು ತರದಲ್ಲಿ ಅಪೂರ್ವ" ಎಂದು ಸೂಚಿಸುವುದಾಗಿದೆ. [13]Isaac Watts, "When I Survey the Wondrous Cross," *Songs of Faith and Praise,* comp. and ed. Alton H. Howard (West Monroe, La.: Howard Publishing Co., 1994). [14]ಈ ವಾಕ್ಯದ ಮತ್ತು ತದ ನಂತರದ ವಾಕ್ಯದಲ್ಲಿ ತಿಳಿದು ಬರುವುದೇನೆಂದರೆ ಮುಂದಿನ ಸುಗ್ಗಿಯಲ್ಲಿ ರೈತ ಮತ್ತು ಆತನ ಕುಟುಂಬ ಕಳೆದುಕೊಂಡರೂ ಆಸ್ತಿಯನ್ನು ವಿಮೆಯಿಂದ ತುಂಬಿಕೊಳ್ಳದೇ ಇರಬಹುದು. [15]ನೋಡಿರಿ ಮಾರ್ಕ 10:30; ಗಲಾತ್ಯ 6:8; 1 ತಿಮೋಥೆ 6:12; ತೀತ 1:2.